(viii) ಶಿವಮೊಗ್ಗ ಜಿಲ್ಲೆ ಹಾರ್ನಹಳ್ಳಿಯಲ್ಲಿ ಕುಡಿಯುವ ನೀರಿನ ಪೂರೈಕೆ ಬಗ್ಗೆ.

ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಸ್ವಾಮಿ, ಶಿವಮೊಗ್ಗಾ ತಾಲ್ಲೂಕಿನಲ್ಲಿ ಹಾರ್ನಹಳ್ಳಿ ಎಂಬುದು ಬಹಳ ದೊಡ್ಡ ಊರು. ಅಲ್ಲಿ ಗ್ರಾಮಾಂತರ ನೀರು ಸರಬರಾಜು ಯೋಜನೆ ಇದೆ. ಆದರೆ ಅಲ್ಲಿ ಕಳೆದ 3 4 ವರ್ಷದಿಂದ ನೀರು ಬರುತ್ತಿಲ್ಲ. ಅಲ್ಲಿ ನೆಲಮಟ್ಟದಲ್ಲಿ ಒಂದು ನೀರಿನ ಟ್ಯಾಂಕನ್ನು ಕಟ್ಟಿ ನೀರನ್ನು ಅದರಲ್ಲಿ ಬಿಟ್ಟಿದ್ದರು. ಆದರೊಳಕ್ಕೆ ಒಬ್ಬ ಹೆಣ್ಣುಮಗಳು ಬಿದ್ದು ಸತ್ತುಹೋಗಿದ್ದಾಳೆ. ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ನಾನು ತಂದಿದ್ದರೂ ಕೂಡ ಅವರು ಯಾವುದೇ ಕ್ರಮವನ್ನು ಇಂದುವರೆಗೂ ತೆಗೆದುಕೊಂಡಿಲ್ಲ. ಇದರ ಬಗ್ಗೆ ಸರ್ಕಾರದ ಗಮನವನ್ನು ನಾನು ಸೆಳೆದಿದ್ದೇನೆ. ಈಗಲಾದರೂ ಸರ್ಕಾರದವರು ಇದರ ಕಡೆ ಗಮನ ಹರಿಸಿ ಸೂಕ್ತ ಕ್ರಮ ತೆಗೆದುಕೊಂಡು ಅಲ್ಲಿನ ಜನರಿಗೆ ಕುಡಿಯುವ ನೀರನ್ನೊದಗಿಸಲು ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.— (ಮಾನ್ಯ ಕಾನೂನು ಹಾಗೂ ಸಂಸದೀಯ ಸಚಿವರು) — ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸಂಬಂಧಪಟ್ಟವರಿಂದ ವರದಿಯನ್ನು ತರಿಸಿಕೊಂಡು ನಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

(xi) ಬೆಂಗಳೂರು ನಗರದ ಸುತ್ತಲೂ ಕೆಂಪೇಗೌಡ ಕಟ್ಟಿಸಿದ ಗೋಪುರಗಳನ್ನು ಸಂರಕ್ಷಿಸುವ ಬಗ್ಗೆ.

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).— ಮಾನ್ಯ ಅಧ್ಯಕ್ಷರೆ, ನಮ್ಮ ಬೆಂಗಳೂರು ನಗರದ ಸುತ್ತಲೂ ಕೆಂಪೇಗೌಡ ಕಟ್ಟಿಸಿದ ಗೋಪುರಗಳಿವೆ. ಇವುಗಳು ಐತಿಹಾಸಿಕ ಮತ್ತು ವಾಸ್ತುಶಿಲ್ಪಗಳಾಗಿವೆ. ಇವುಗಳ ಪೈಕಿ ಒಂದು ಸದಾಶಿವನಗರದ ಮುಂದೆ ಬಳ್ಳಾರಿ ರಸ್ತೆಯಲ್ಲಿ ಇದೆ. ಅಲ್ಲಿ ಒಂದು ದೊಡ್ಡ ನಿವೇಶನ ಇದ್ದು ಆದರಲ್ಲಿ ಒಂದು ಕಟ್ಟಡ ಬರುತ್ತಿದೆ. ಇದು ಕೆಂಪೇಗೌಡ ಗೋಪುರಕ್ಕೆ ಅಡ್ಡ ಬರುತ್ತಿರುವುದರಿಂದ ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಈ ನಿವೇಶನ ಯಾರಿಗೆ ಸೇರಿದ್ದೆಂದು ಕಾರ್ಪೊರೇಷನ್‌ನವರನ್ನು ಕೇಳಿದರೆ ಬಿ ಡಿ ಎ. ನವರಿಗೆ ಬರುತ್ತದೆಂದು ಹೇಳುತ್ತಾರೆ, ಬಿ ಡಿ ಎ. ನವರನ್ನು ಕೇಳಿದರೆ ಕಾರ್ಪೊರೇಷನ್‌ಗೆ ಸೇರುತ್ತದೆಂದು ಹೇಳುತ್ತಾರೆ. ಇದು ಯಾರಿಗೂ ಸರಿಯಾಗಿ ಗೊತ್ತಿಲ್ಲ. ಈಗ ಆ ನಿವೇಶನದಲ್ಲಿ ಒಂದು ದೊಡ್ಡ ಕಟ್ಟಡ ಬರುತ್ತಿದೆ. ಆದರೆ ಕೆಂಪೇಗೌಡ ಗೋಪುರ ಇರುವ ಪ್ರದೇಶದಲ್ಲಿ ಯಾವುದೇ ವಿಧವಾದ ಕಟ್ಟಡವನ್ನು ಕಟ್ಟಬಾರದೆಂದು ಹಿಂದೆ ತೀರ್ಮಾನವಾಗಿದೆ. ಹಿಂದೆ ವಿಧಾನಸೌಧದ ಮುಂದೆ ಒಂದು ಕಟ್ಟಡವನ್ನು ಕಟ್ಟಬೇಕೆಂದು ಹೇಳಿದಾಗ ಆಗಿನ ಮುಖ್ಯಮಂತ್ರಿಗಳಾದ ಹನುಮಂತಯ್ಯನವರು ಅವಕ್ಕೆ ಅವಕಾಶವನ್ನು ಕೊಡಲಿಲ್ಲ. ಅದೇ ರೀತಿ ಇಲ್ಲೂ ಕೂಡ ಜಲಮಂಡಲಿಯವರು ಆ ಪ್ರದೇಶದಲ್ಲಿ ಕಟ್ಟಡವನ್ನು ಕಟ್ಟಿಕೊಳ್ಳುತ್ತೇವೆಂದು ಕೇಳಿದಾಗ ಅದಕ್ಕೂ ಅವಕಾಶ ಕೊಡಲಿಲ್ಲ. ಆದರೆ ಈಗ ಅದೇ ಪ್ರದೇಶದಲ್ಲಿ ರಮಣ ಮಹರ್ಷಿ ಸಂಸ್ಥೆಗೆ ಸೇರಿದ ಕಟ್ಟಡವನ್ನು 4 ಅಂತಸ್ತಿಗೆ ಕಟ್ಟಬೇಕೆಂದು ಮಾತುಕತೆ ನಡೆಸುತ್ತಿದ್ದಾರೆ. ಆದ್ದರಿಂದ ಕೂಡಲೇ ನಗರಸಭೆಯವರು ಆಗಲಿ ಅಥವಾ ಅಭಿವೃದ್ಧಿ ಪ್ರಾಧಿಕಾರದವರಾಗಲಿ ಇದನ್ನು ನಿಲ್ಲಿಸಬೇಕು. ಕೆಂಪೇಗೌಡನ ಸ್ಮರಣಾರ್ಥ ಇರತಕ್ಕ ಈ ಗೋಪುರಗಳನ್ನು ತಾವು ರಕ್ಷಣೆ ಮಾಡಬೇಕು. ರಮಣ ಮಹರ್ಷಿ ಸಂಸ್ಥೆಯ ಅಧಿಕಾರವರ್ಗದವರಿಗೆ ಬಹಳ ಪ್ರಭಾವೀ ಅಧಿಕಾರಿಗಳು ಅವಕಾಶವನ್ನು ಕೊಟ್ಟಿದ್ದಾರೆಂದು ಕೇಳಿದ್ದೇವೆ ಅದು ಯಾರೇ ಆಗಲಿ, ನಮ್ಮ ಬೆಂಗಳೂರು ಕೆಂಪೇಗೌಡ ಕಟ್ಟಿಸಿರತಕ್ಕ ಗೋಪುರಗಳ ವಿಷಯದಲ್ಲಿ ಯಾವುದೇ ಕಟ್ಟಡಗಳು ಬರದಂತೆ ನೋಡಿಕೊಳ್ಳುವುದರ ಜೊತೆಗೆ ಈ ಗೋಪುರಗಳನ್ನು ರಕ್ಷಿಸುವ ಕೆಲಸವನ್ನು ಬಹಳ ಗಂಭೀರವಾಗಿ ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ಕೆ ರಾಮಯ್ಯ (ಕುಣಿಗಲ್).— ಮಾನ್ಯ ಅಧ್ಯಕ್ಷರೆ, ಕೆಂಪೇಗೌಡನು ಬೆಂಗಳೂರಿನ 4 ದಿಕ್ಕುಗಳಲ್ಲೂ ಗೋಪುರಗಳನ್ನು ನಿರ್ಮಿಸಿದ್ದಾನೆ. ಇದು ಎಲ್ಲರಿಗೂ ತಿಳಿದಿರತಕ್ಕ ವಿಚಾರ. ಈ ವಿಷಯವನ್ನು ನಾವು ಯಾವ ದೃಷ್ಟಿಯಿಂದ ನೋಡಿದರೂ ಬಹಳ ಸಂತೋಷವಾದುದು. ಆದರೆ ಈಗ ಬಳ್ಳಾರಿ ರಸ್ತೆಯಲ್ಲಿರುವ ಗೋಪುರದ ಎದುರುಗಡೆ ಒಂದು ದೊಡ್ಡ ಕಟ್ಟಡ ಬರುತ್ತಿದೆ. ಆದರೆ ಈ ಸ್ಥಳದಲ್ಲಿ ಒಂದು ಒಳ್ಳೆಯ ಉದ್ಯಾನವನವನ್ನು ನಿರ್ಮಾಣ ಮಾಡಬೇಕೆಂದು ಬಹಳ ಹಿಂದೆಯೇ ಟೌನ್ ಪ್ಲಾನಿಂಗ್‌ನವರು ತೀರ್ಮಾನ ತೆಗೆದುಕೊಂಡಿದ್ದರು. ಇದೇ ವಿಚಾರದಲ್ಲಿ ಹಿಂದೆ ಚರ್ಚೆ ಕೂಡ ಆಗಿದೆ. ಯಾವುದೇ ಸ್ಥಳವನ್ನಾಗಲೀ ಯಾವ ಉದ್ದೇಶಕ್ಕೋಸ್ಕರ ಮೀಸಲು ಇಡಲಾಗುತ್ತದೆ ಅದೇ ಉದ್ದೇಶಕ್ಕಾಗಿ ಆ ಸ್ಥಳವನ್ನು ಉಪಯೋಗಿಸಿಕೊಳ್ಳಬೇಕೇ ಹೊರತು ಬೇರೆ ಉದ್ದೇಶಕ್ಕೂ ಅದನ್ನು ಉಪಯೋಗಿಸಿಕೊಳ್ಳಕೂಡದೆಂದು ಸರ್ಕಾರದ ತೀರ್ಮಾನವಾಗಿದೆ. ಉದಾಹರಣೆಗೆ ಹೇಳುವುದಾದರೆ ಶಾಲಾಕಾಲೇಜುಗಳಿಗಾಗಿ ಇಟ್ಟ ನಿವೇಶನದಲ್ಲಿ ಶಾಲಾಕಾಲೇಜುಗಳನ್ನು ಕಟ್ಟಬೇಕೇ ಹೊರತು ಅಲ್ಲಿ ಮಸೀದಿಯನ್ನಾಗಲಿ, ದೇವಸ್ಥಾನವನ್ನಾಗಲೀ ಕಟ್ಟುವಂತಿಲ್ಲ. ಅದೇ ರೀತಿ ಈ ಪ್ರದೇಶದಲ್ಲಿ ಉದ್ಯಾನವನಕ್ಕಾಗಿ ಮೀಸಲು ಇಟ್ಟಿರುವುದರಿಂದ ಅಲ್ಲಿ ಉದ್ಯಾನವನವನ್ನೇ ನಿರ್ಮಾಣ ಮಾಡಬೇಕು. ಆದರೆ ಈಗ ಅಲ್ಲಿ ಒಂದು ದೊಡ್ಡ ಕಟ್ಟಡ ಕಟ್ಟುತ್ತಿರುವುದರಿಂದ ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ನಾನು ಕೇಳಬಯಸುತ್ತೇನೆ.

ಶ್ರೀ ಹೆಚ್.ಜಿ. ಚೆನ್ನಪ್ಪ.—ಅಧ್ಯಕ್ಷರೇ,1972-73 ನೇ ಸಾಲಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇದರ ಸುತ್ತ ಮುತ್ತ ಕಟ್ಟಡ ಕಟ್ಟಬಾರದು ಎನ್ನುವ ಕಾನೂನು ಮಾಡಿ, ಅದನ್ನು ರಿಸರ್ವ್ ಮಾಡಿದ್ದರೂ ಸಹ ಅಲ್ಲಿ ಕಟ್ಟಲಿಕ್ಕೆ ಯಾವ ಆಧಾರದ ಮೇಲೆ ಅನುಮತಿ ಕೊಟ್ಟಿದ್ದಾರೆ.ಈಗಲೂ ಅದನ್ನು ತಡೆಗಟ್ಟಲಿಕ್ಕೆ ಪ್ರಯತ್ನ ಮಾಡಿ ಅಲ್ಲಿ ಆಗಿರತಕ್ಕ ಕಟ್ಟಡಗಳಿಗೆ ಕಾಂಪನ್‌ಸೇಷನ್ ಕೊಟ್ಟು ಖಿಲ್ಲಾ ಮಾಡಿಸಿ ನಗರದ ವೈಭವವನ್ನ ಉಳಿಸಿಕೊಳ್ಳಲಿಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲವೇ ಎಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಸಚಿವರು).— ಅಧ್ಯಕ್ಷರೆ, ರಮಣ ಮಹರ್ಷಿ ಆಧ್ಯಯನ ಕೇಂದ್ರಕ್ಕೆ ತಾ. 30-9-1981ರ ಸರ್ಕಾರದ ಆದೇಶದ ಮೇರೆಗೆ ಪ್ರಾಧಿಕಾರದವರು ಒಂದು ನಿವೇಶನ ಮಂಜೂರು ಮಾಡಿದ್ದಾರೆ. ಸರ್ಕಾರದಿಂದ 250 ಅಡಿ, × 250 ಅಡಿ ಕೊಡಿ ಎಂದು ಹೇಳಿದ್ದಕ್ಕೆ ಪ್ರಾಧಿಕಾರದವರು 120 ಅಡಿ × 185 ಅಡಿ ವಿಸ್ತೀರ್ಣದ ಜಮೀನನ್ನು ಕೊಟ್ಟಿದ್ದಾರೆ. 15-10-81ರಲ್ಲಿ ಆ ಸ್ಥಳದಲ್ಲಿ ಒಂದು ಪ್ರಾರ್ಥನಾ ಮಂದಿರ ಕಟ್ಟುವ ಹಾಗೆ ನಕ್ಷೆ ಕೊಟ್ಟರು, ಅದು ಮಂಜೂರು ಆಯಿತು. ಅಲ್ಲಿ ಪ್ರಾರ್ಥನಾ ಮಂದಿರ ಬಂದಿದೆ. 16-7-1982ರಲ್ಲಿ ಮತ್ತೊಂದು ಅರ್ಜಿಯನ್ನು ಕೊಟ್ಟು ಮತ್ತೆ ಸ್ಥಳ ಬೇಕು ಎಂದು ಕೇಳಿದಾಗ ಸರ್ಕಾರದ ಆದೇಶ ನೀಡಿದ ಮೇರೆಗೆ 62,410 ಚದುರ ಅಡಿಯಷ್ಟು ಜಮೀನು ಪ್ರಾಧಿಕಾರ 20-10-82ರಲ್ಲಿ ಕೊಟ್ಟಿದೆ. ಹೊಸದಾಗಿ ತೆಗೆದುಕೊಂಡಿರತಕ್ಕ ನಿವೇಶನದಲ್ಲಿ ಕಛೇರಿ ಕಟ್ಟಡ, ನಾಟ್ಯದ ಒಂದು ರಂಗಮಂಟಪ, ಲೈಬ್ರರಿ ಹೀಗೆ ನಾನಾ ಕಾರ್ಯಗಳಿಗೆ ಗೋಸ್ಕರ ಒಂದು ನಕ್ಷೆ ಕೊಟ್ಟಾಗ ಆ ನಕ್ಷೆ ಈಗ ಇರುವಂಥ ಪ್ರಾರ್ಥನಾ ಮಂದಿರದ ಪಕ್ಕದಲ್ಲಿರುವುದರಿಂದ, ಬಳ್ಳಾರಿ ರಸ್ತೆಯಿಂದ ಆ ಗೋಪುರ ದೃಷ್ಟಿಗೆ ಅಡ್ಡ ಬರುತ್ತದೆ ಎಂದು ಸಾರ್ವಜನಿಕರು ದೂರುಕೊಟ್ಟರು. ಈ ಕಟ್ಟಡವನ್ನು ಉತ್ತರ ಭಾಗಕ್ಕೆ ಬದಲಾಯಿಸಿದ್ದರಿಂದ ಆ ಮಧ್ಯದಿಂದ ಮೇಲಿನ ಗೋಪುರ ಕಾಣಲಿಕ್ಕೆ ಅವಕಾಶ ಆಯಿತು. ಆ ನಕ್ಷೆ ಬದಲಾವಣೆ ಮಾಡಿ ಪ್ರಾಧಿಕಾರದವರು ಮಂಜೂರಾತಿ ಮಾಡಿದರು. ಆದು ಆದಮೇಲೆ ಕೆಲಸ ಪ್ರಾರಂಭವಾಯಿತು. ತದನಂತರ ಯಥಾಪ್ರಕಾರ ಮತ್ತೆ ಸಾರ್ವಜನಿಕರಿಂದ ಆ ಬಗ್ಗೆ ದೂರುಗಳು ಬಂದವು. ಈಗ ನಾವು ಹೋಗಿ ಸ್ಥಳ ಪರೀಕ್ಷೆ ಮಾಡಿ, ಆ ಪ್ರದೇಶದ ಮಹತ್ವ ಅರಿತುಕೊಂಡು, ಕೆಲಸವನ್ನು ಸ್ಥಗಿತ ಮಾಡಿದ್ದರಿಂದ, ಕೆಲಸ ನಿಂತು ಹೋಗಿದೆ. ಈ ವಿಚಾರದಲ್ಲಿ, ಈ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಪ್ರಸ್ತಾಪ ಆಯಿತು, ಸಾರ್ವಜನಿಕರ ಗಮನಕ್ಕೂ ಬಂದಿದೆ. ಕೆಂಪೇಗೌಡರ ಸ್ಮಾರಕದ ಗುರುತುಗಳು ಬೆಂಗಳೂರು ನಾಲ್ಕು ಭಾಗಗಳಲ್ಲೂ ಉಳಿಯಬೇಕೆಂಬ ದೃಷ್ಟಿಯಿಂದ ಉದ್ಯಾನವನಗಳಾಗಿ ಪರಿವರ್ತನೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆ. ಈಗ ಅಲ್ಲಿರತಕ್ಕ ಪ್ರದೇಶವನ್ನೆಲ್ಲಾ ಬೆಂಗಳೂರು ನೀರು ಸರಬರಾಯಿ ಮಂಡಲಿಯವರಲ್ಲಿರತಕ್ಕ ಪ್ರದೇಶ, ಮಿಕ್ಕಿದ್ದು ಪ್ರಾಧಿಕಾರದ ವಶದಲ್ಲಿರತಕ್ಕ ಪ್ರದೇಶವನ್ನು ಉದ್ಯಾನವನವಾಗಿ ಪರಿವರ್ತನೆ ಮಾಡುತ್ತಿದ್ದೇವೆ. ಈಗಾಗಲೇ ಸಾರ್ವಜನಿಕರ ಅಭಿಪ್ರಾಯದ ಪ್ರಕಾರ ಕೆಲಸ ನಿಲ್ಲಿಸಿದೆ. ಕಾನೂನು ಪ್ರಕಾರ ಇರುವಂಥ ಪ್ರಾರ್ಥನಾ ಮಂದಿರದಲ್ಲಿ ಕಾರ್ಯ ಚಟುವಟಿಕೆಗಳು ನಡೆಯುತ್ತಿದೆ. ಹಿಂದೆ ಇದ್ದ ಭಾಗ ಅದನ್ನು ಬಿಟ್ಟು ಹೊಸದಾಗಿ ಆಗಿರತಕ್ಕದ್ದು, ಗೋಪುರ ಇರುವಂಥ ಪ್ರದೇಶಕ್ಕೆ ಯಾವುದು ಅಡ್ಡ ಬರುತ್ತದೆ, ಅದರ ಬಗ್ಗೆ ಪರಿಗಣನೆಗೆ ತೆಗೆದುಕೊಂಡು, ನಿಯಮಬದ್ಧವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ಅಲ್ಲಿ ಕೆಲಸ ನಿಲ್ಲಿಸಿದ್ದೇವೆ.

ಶ್ರೀ ವೈ. ಕೆ. ರಾಮಯ್ಯ.— ಅಧ್ಯಕ್ಷರೆ, ಮಾನ್ಯ ಮಂತ್ರಿಗಳಲ್ಲಿ ಕ್ಲಾರಿಫಿಕೇಷನ್ ಕೇಳಬೇಕಾಗಿದೆ.

ಅಧ್ಯಕ್ಷರು.— ನಿಯಮ 334ರ ಪ್ರಕಾರ ಕ್ಲಾರಿಫಿಕೇಷನ್ ಕೇಳಲಿಕ್ಕೆ ಆಗುವುದಿಲ್ಲ.

ಶ್ರೀ ವೈ. ಕೆ. ರಾಮಯ್ಯ — ಅಲ್ಲಿ ಬಯಲು ವಲಯವಾಗಿ ಉಳಿಸಿಕೊಂಡಿದ್ದರೂ, ಅಲ್ಲಿ ಕಟ್ಟಡ ಕಟ್ಟಿದ್ದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ ಚಂದ್ರಶೇಖರ್.— ಈಗಾಗಲೇ ನಾವು ಒಂದು ವಿಧೇಯಕವನ್ನು ಪಾಸ್ ಮಾಡಿದ್ದೇವೆ. ಯಾವ ಉದ್ದೇಶಕ್ಕೋಸ್ಕರ ಪ್ರಾಧಿಕಾರದವರು ಕೊಟ್ಟಿರುತ್ತಾರೆ, ಅದನ್ನು ಅವರು ಬೇರೆಯದಕ್ಕೆ ಉಪಯೋಗಿಸಿದರೆ ಕಾನೂನು ಬಾಹಿರ ಎಂದು ಈ ಸಾರಿ ಮಾಡಿದ್ದೇವೆ. ಹಿಂದೆ ಆ ರೀತಿ ಇರಲಿಲ್ಲ.

8. ಗಮನ ಸೆಳೆಯುವ ಸೂಚನೆ

ವಿಷಯ : ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿಯ ಮಲ್ಲಿಪುರ ಗ್ರಾಮವನ್ನು ಸ್ಥಳಾಂತರಿಸಬೇಕೆಂದಿರುವ ವಿಚಾರದ ಬಗ್ಗೆ.

ಶ್ರೀ ಎಂ. ಮಹದೇವ್ — ಅಧ್ಯಕ್ಷರೆ, ಕಬಿನಿ ನಾಲೆಯಿಂದ (ಕವಲು) ಬಿಡುವ ನೀರಿನಿಂದಾಗಿ ಸಂಕಷ್ಟಕ್ಕೊಳಗಾಗಿರುವ ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿಯ ಮಲ್ಲಿಪುರ ಗ್ರಾಮವನ್ನು ಈ ಕೂಡಲೇ ಸ್ಥಳಾಂತರಿಸಬೇಕೆಂಬ ವಿಚಾರದ ಬಗ್ಗೆ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—

ನಂಜನಗೂಡು ತಾಲ್ಲೂಕು ಬಿಳಿಗೆರೆ ಹೋಬಳಿಯ, ಮಲ್ಲಿಪುರ ಗ್ರಾಮವು ಕಬಿನಿ ಬಲದಂಡೆ ಕಾಲುವೆಯ 30ನೆಯ ವಿತರಣಾ ಕಾಲುವೆಯ ಅಚ್ಚುಕಟ್ಟಿನಲ್ಲಿ ಬರುತ್ತದೆ.